*ಈ ಯೋಜನೆಯು ಇಂಡಿಯಾ ಫೌಂಡೇಷನ್ ಆಫ್ ಆರ್ಟ್ಸ್‌ನವರ ಸಹಕಾರದಿಂದ 560 ಕಾರ್ಯಕ್ರಮದ ಅಡಿ ಸಾಧ್ಯವಾಗಿದೆ.*

# ಬೆವರು

ನವೆಂಬರ್ 2019 | ಬೆಂಗಳೂರು

ರೂ. 5 /

Vol. 3

*ಪ್ರೀತಿ, ಘನತೆ, ಹೋರಾಟ*

**ಒಕ್ಕೂಟಗಳು ಮತ್ತು ಗೃಹ ಕಾರ್ಮಿಕರ ಸಂಘಗಳು, ಲೈಂಗಿಕ ಕಾರ್ಯಕರ್ತರು, ಪೌರಕಾರ್ಮಿಕರು ಮತ್ತು ಗಾರ್ಮೆಂಟ್ ಕಾರ್ಮಿಕರ ಸಹಯೋಗದೊಂದಿಗೆ.**

## ಕಾರ್ಮಿಕರ ವಿರುದ್ಧದ ಕಾನೂನು

ದೇಶದ ಕಾರ್ಮಿಕರಿಗೆ ಸಂಬಂಧಿಸಿದ ಕಾನೂನು, ಕಾಯಿದೆಗಳನ್ನು ಬದಲಿಸುವುದು ಮೋದಿ ಸರ್ಕಾರದ ಬಹುದೊಡ್ಡ ಪ್ರಯತ್ನಗಳಲ್ಲಿ ಒಂದಾಗಿದೆ. ಹೀಗಾಗಿ ಮೋದಿ ಸರ್ಕಾರವು, 44 ವಿವಿಧ ಕಾರ್ಮಿಕ ಕಾನೂನುಗಳನ್ನು ಕಾರ್ಮಿಕ, ವೃತ್ತಿ, ಸಂಬಂಧೀ ಸುರಕ್ಷೆ, ಆರೋಗ್ಯ ಹಾಗೂ ಕೆಲಸದ ಪರಿಸ್ಥಿತಿ, ಸಾಮಾಜಿಕ ಸುರಕ್ಷೆ ಮತ್ತು ಕೈಗಾರಿಕಾ ಬಾಂಧವ್ಯ ಎಂಬ 4 'ಸರಳ' ಸಂಹಿತೆಗಳನ್ನಾಗಿ ಬದಲಿಸುತ್ತಿದೆ.

ಆರ್.ಎಸ್.ಎಸ್ ಬೆಂಬಲಿತ ಭಾರತೀಯ ಮಜ್ದೂರ್ ಸಂಘವೂ ಸಹ ಈ ಹೊಸ ಕಾರ್ಮಿಕ ಸಂಹಿತೆಗಳನ್ನು ವಿರೋಧಿಸಿದೆ. ಕಾರ್ಮಿಕರ ಭವಿಷ್ಯ ನಿಧಿ (ESI) ಮತ್ತು EPFಗಳಂತಹ ನಿರ್ದಿಷ್ಟ ಸಾಮಾಜಿಕ ಭದ್ರತೆಗಳನ್ನು ರದ್ದುಗೊಳಿಸಿ ಅದನ್ನು ಕೇಂದ್ರೀಕೃತ ನಿಧಿಯನ್ನಾಗಿಸುವುದು ಈ ಕಾರ್ಮಿಕ ಸಂಹಿತೆಗಳು ಉಂಟುಮಾಡುವ ಬಹುದೊಡ್ಡ ಸಮಸ್ಯೆಗಳಲ್ಲಿ ಒಂದಾಗಿದೆ. ಈ ಸಾಮಾಜಿಕ ಭದ್ರತೆಗಳನ್ನು ಖಾಸಗೀಕರಣಗೊಳಿಸಲೂ ಸಹ ಮೋದಿ ಸರ್ಕಾರ ಚಿಂತಿಸುತ್ತಿದೆ. ಅಂದರೆ, ಕಾರ್ಮಿಕರ ಕಲ್ಯಾಣಕ್ಕಾಗಿ ಇರುವ ಹಣವು, ತಾವು ಹೂಡಿದ ಬಂಡವಾಳಕ್ಕೆ ಸದಾ ಹೆಚ್ಚು ಲಾಭವನ್ನೇ ಬಯಸುವ ಖಾಸಗಿ ಸಂಸ್ಥೆಗಳ ಪಾಲಾಗುತ್ತದೆ ಎಂದೇ ಅರ್ಥ.

ಮಾಲೀಕರು ಮತ್ತು ಆಡಳಿತವರ್ಗಗಳನ್ನು ಸಂತೋಷಗೊಳಿಸಲೆಂದೇ ಈ ಕಾರ್ಮಿಕ ಕಾನೂನುಗಳ ಬದಲಾವಣೆ ಮಾಡಲಾಗಿದೆ ಎನಿಸುತ್ತಿದೆ. ಏಕೆಂದರೆ ಭಾರತದಲ್ಲಿ ವ್ಯಾಪಾರ ವಹಿವಾಟು ನಡೆಸಲು ಬಹಳ ಅಡೆತಡೆಗಳಿವೆ ಎಂದು ಮಾಲೀಕರು ಹೇಳುತ್ತಲೇ ಇದ್ದಾರೆ. ಉದಾಹರಣೆಗೆ ಯಾವುದೇ ವ್ಯಾಪಾರ, ವ್ಯವಹಾರ ಪ್ರಾರಂಭಿಸುವುದಕ್ಕಿಂತ ಮುನ್ನ, ಹಲವಾರು ರೀತಿಯಲ್ಲಿ ನೋಂದಣಿಯಾಗಬೇಕಾಗುತ್ತದೆ. ಜೊತೆಗೆ ಮಾಲೀಕರು ಕಾರ್ಮಿಕ ಕಾನೂನುಗಳನ್ನು ಉಲ್ಲಂಘಿಸಿದ ಬಗ್ಗೆ ದೂರು ಬಂದಲ್ಲಿ, ಕಾರ್ಮಿಕ ಇಲಾಖೆಗೆ ತನಿಖೆ ನಡೆಸುವ ಅಧಿಕಾರ ಇದೆ. ಹೀಗಿರುವಾಗ ಈ ನಾಲ್ಕು ಕಾನೂನು ಸಂಹಿತೆ ರೂಪಿಸಿ, ಕಾರ್ಮಿಕ ಕಾನೂನುಗಳಿಗೆ ಬದಲಾವಣೆ ತಂದಲ್ಲಿ ಮಾಲೀಕರು ತಮ್ಮ ವ್ಯಾಪಾರ ವ್ಯವಹಾರ ನಡೆಸಲು ಸುಲಭವಾಗಬಹುದು, ಜೊತೆಗೆ ಕಾರ್ಮಿಕರಿಗೆ ಯಾವುದೇ ಕೆಲಸದ ಭದ್ರತೆ, ಸಾಮಾಜಿಕ ಭದ್ರತೆ ನೀಡದೆ, ಇಷ್ಟ ಬಂದಾಗ ಅವರನ್ನು ತೆಗೆದುಹಾಕಲೂ ಸಹ ಸುಲಭವಾಗಬಹುದು.

ಈ ಕಾರ್ಮಿಕ ಸಂಹಿತೆಗಳು, ಕಾರ್ಮಿಕರಿಗೆ ಸುರಕ್ಷಿತ ಕೆಲಸದ ವಾತಾವರಣವನ್ನು ಒದಗಿಸಿಕೊಡಲು ಬೇಕಾದ ನಿಯಮಗಳನ್ನು ಸಡಿಲಗೊಳಿಸುತ್ತದೆ. ಕಾರ್ಮಿಕರ ಪ್ರತಿಭಟನೆ ನಡೆಸುವ ಹಕ್ಕನ್ನು ನಿರ್ಬಂಧಿಸುತ್ತದೆ. ಭಾರತದ ಒಟ್ಟು ದುಡಿಮೆಗಾರರಲ್ಲಿ 70%ರಷ್ಟು ಮಂದಿ ಕಾರ್ಮಿಕರೇ ಹೊರತು ನೌಕರರಲ್ಲ. ಅಂದರೆ ಈ ಕಾರ್ಮಿಕರು ಪಿ.ಎಫ್ ಮತ್ತು ಇ.ಎಸ್.ಐ ನಂತಹ ಸಾಮಾಜಿಕ ಸುರಕ್ಷೆಗೆ ಅರ್ಹರಾಗಿರುವುದಿಲ್ಲ. 1970ರ ಗುತ್ತಿಗೆ ಕಾರ್ಮಿಕರ ಕಾಯಿದೆಯ ಪ್ರಕಾರ, ಯಾವುದೇ ಗುತ್ತಿಗೆ ಕಾರ್ಮಿಕರು 240 ದಿನಗಳನ್ನು ಪೂರ್ಯೆಸಿದಲ್ಲಿ ಅವರು ಖಾಯಂ ಕಾರ್ಮಿಕರಾಗುತ್ತಾರೆ. ಈಗ ಫಿಕ್ಸಿಡ್ ಟರ್ಮ್ ಎಂಪ್ಲಾಯ್‌ಮೆಂಟ್'ನ ಪರಿಚಯದೊಂದಿಗೆ ಕಾರ್ಮಿಕರಿಗೆ ಈ ಹಕ್ಕನ್ನೂ ನಿರಾಕರಿಸಲಾಗುತ್ತಿದೆ, ಏಕೆಂದರೆ ಖಾಯಂಕಾರ್ಮಿಕರು ಎಂಬ ಪರಿಕಲ್ಪನೆಯನ್ನೇ ತೆಗೆದುಹಾಕಿದಲ್ಲಿ, ಮಾಲೀಕರು ಕಾರ್ಮಿಕರಿಗೆ ಕೆಲಸದ ಭದ್ರತೆಯನ್ನು ಖಾತ್ರಿ ಪಡಿಸಬೇಕಾಗಿಲ್ಲ. ಹಿಂದಿದ್ದ ಕಾನೂನನ್ನೂ ಸಹ ಮಾಲೀಕರೇನೂ ಪೂರ್ಣ ಪ್ರಮಾಣದಲ್ಲಿ ಜಾರಿಗೊಳಿಸುತ್ತಿರಲಿಲ್ಲ, ಆದರೂ ಈ ಹೊಸ ಬದಲಾವಣೆಯಿಂದಾಗಿ ಕಾರ್ಮಿಕರಿಗಿದ್ದ ಕಾನೂನಿನ ರಕ್ಷಣೆಯೂ ಇಲ್ಲವಾಗುತ್ತದೆ.

ಪ್ರಸ್ತುತ ಕೇಂದ್ರಸರ್ಕಾರವು ರೂ.336ನಷ್ಟು ಕನಿಷ್ಠವೇತನವನ್ನು ನಿಗದಿಗೊಳಿಸಿದೆ (ಜೊತೆಗೆ ಬೆಲೆಯೇರಿಕೆಗಾಗಿ ಒಂದಷ್ಟು ಮೊತ್ತದ ಹಣ). ರಾಜ್ಯಸರ್ಕಾರಗಳು ಈ ಮೊತ್ತ ಮುಟ್ಟುವವರೆಗೂ ತಮ್ಮ ರಾಜ್ಯಗಳಲ್ಲಿ ಕನಿಷ್ಠವೇತನವನ್ನು ಹೆಚ್ಚಿಸಬಹುದು. ಹೊಸ ವೇತನ ಸಂಹಿತೆಯು ಕನಿಷ್ಠವೇತನದ ಬಗ್ಗೆ ಹೆಚ್ಚೇನೂ ಮಾತನಾಡುವುದಿಲ್ಲ. ಕಾರ್ಮಿಕರಿಗೆ ಕನಿಷ್ಠವೇತನವನ್ನು ನಿಗದಿಪಡಿಸಲು ಇರುವ ಅವಕಾಶ ಅತ್ಯಂತ ಕಡಿಮೆ. ದೇಶದ ಬಹುತೇಕ ಕಾರ್ಮಿಕರು ಕೆಲಸದ ಭದ್ರತೆ ಮತ್ತು ಸಾಮಾಜಿಕ ಭದ್ರತೆಯಿಲ್ಲದೆ ಅಸಂಘಟಿತ ಕ್ಷೇತ್ರಗಳಲ್ಲಿ ದುಡಿಯುತ್ತಿದ್ದಾರೆ ಎಂದರೆ, ಅವರ ವೇತನವು ಇನ್ನೂ ಇಳಿಮುಖವಾಗುವುದರಲ್ಲಿ ಸಂಶಯವೇ ಇಲ್ಲ. ಈ ಕಾರ್ಮಿಕ ಸಂಹಿತೆಗಳು ಅಂತಿಮವಾಗಿ ಸಾಮಾನ್ಯ ದುಡಿಮೆಯ ದಿನ ಎಂದರೆ ಏನು ಎಂಬುದನ್ನು ಮಾತ್ರ ರಾಜ್ಯಸರ್ಕಾರಗಳಿಗೆ ನಿರ್ಣಯಿಸಲು ಬಿಡುತ್ತವೆ. ಏಕೆಂದರೆ ಸಾಮಾನ್ಯವಾಗಿ ದುಡಿಮೆಯ ದಿನ ಎಂದರೆ 8 ಗಂಟೆಯ ಕೆಲಸದ ಅವಧಿ, ಆದರೆ ಈ ಹೊಸ ಸಂಹಿತೆಯ ಪ್ರಕಾರ, ರಾಜ್ಯಸರ್ಕಾರಗಳು ಈ ಅವಧಿಯನ್ನು ಹೆಚ್ಚಿಸಿ 'ಸಾಮಾನ್ಯ ದುಡಿಮೆಯ ದಿನ'ವನ್ನಾಗಿ ನಿಗದಿಪಡಿಸಬಹುದು.

ಕಾರ್ಮಿಕರ ಮತ್ತು ನೌಕರರ ಮಧ್ಯೆ ಒಡಕು ಮೂಡಿಸುವುದಕ್ಕೆ ಈ ಸರ್ಕಾರವು ಪ್ರಯತ್ನಿಸುತ್ತಿದೆ, ಜೊತೆಗೆ ಕೇವಲ ಬದುಕಲು ದುಡಿಯುತ್ತಿರುವ ಕಾರ್ಮಿಕರ ಮೇಲೆ ಈ ಕ್ರಮಗಳು ವ್ಯತಿರಿಕ್ತ ಪರಿಣಾಮ ಬೀರುತ್ತದೆ. ಇಲ್ಲಿಯವರೆಗೂ ಎಲ್ಲಾ ಕೇಂದ್ರೀಯ ಸಂಘಟನೆಗಳೂ ಸಹ ಈ ಕಾನೂನು ಸಂಹಿತೆಗಳನ್ನು ವಿರೋಧಿಸಿದ್ದರೂ, ಸರ್ಕಾರವು ತನ್ನ ಇಚ್ಛೆಯಂತೆಯೇ ನಡೆದುಕೊಳ್ಳುತ್ತಿದೆ. ಕಾರ್ಮಿಕರು ಮತ್ತು ನೌಕರರು ಒಟ್ಟಾಗಿ ತಮ್ಮ ಧ್ವನಿಯನ್ನು ಸರ್ಕಾರಕ್ಕೆ ಕೇಳಿಸಬೇಕಿದೆ.

## ಅಲ್ಲಿ. . .ಇಲ್ಲಿ. . . ಎಲ್ಲೆಲ್ಲೂ. . . .

ಬಸ್ತಿಯಲ್ಲಿ ಕಾಲಿಡುತ್ತಿದ್ದಂತೆ, ನಿಮ್ಮ ಮೂಗಿಗೆ ಸಾಸುವೆ ಎಣ್ಣೆಯ ಪ್ರತ್ಯೇಕ ವಾಸನೆಯು ಅಡರುತ್ತದೆ. ಯುವಕರು ಅಲ್ಲಿನ ಟೀ ಅಂಗಡಿಯಲ್ಲಿರುವ ಕೇರಂ ಬೋರ್ಡ್ ಸುತ್ತ ನೆರೆದಿದ್ದಾರೆ. ನೀವು ಹೆಜ್ಜೆ ಮುಂದೆ ಇಟ್ಟಂತೆ ಎಲ್ಲೆಲ್ಲೂ ಬಂಗಾಳಿಯ ಪಿಸುಮಾತು ನಿಮ್ಮನ್ನು ಹಿಂಬಾಲಿಸುತ್ತದೆ. ಇದು ಬಂಗಾಳವಿದ್ದಿರಬೇಕು ಎಂದೆನಿಸಬಹುದು. ಆದರೆ ಇದು ತುಬರನಹಳ್ಳಿ ಬಸ್ತಿ. ಉತ್ತಮ ಜೀವನವನ್ನರಸಿ ದೂರದ ಬಂಗಾಳ ಮತ್ತು ಬಾಂಗ್ಲಾದೇಶದಿಂದ ಬಂದಿರುವ 10000ಕ್ಕೂ ಹೆಚ್ಚು ವಲಸೆ ಕಾರ್ಮಿಕರ ವಾಸಸ್ಥಳ.

"ನಮ್ಮ ಊರಲ್ಲಿ ನಮಗೆ ನಮ್ಮ ಜಮೀನುಗಳು ಮಾತ್ರ ಇವೆ, ಅಲ್ಲಿ ದುಡ್ಡು ಮಾಡಲು ಸಾಧ್ಯವಿಲ್ಲ, ಕನಿಷ್ಠ ಪಕ್ಷ ಇಲ್ಲಿ ನಾವು ಹಣ ಸಂಪಾದಿಸುತ್ತಿದ್ದೇವೆ"

ಈ ತುಬರನ ಹಳ್ಳಿ ಬಸ್ತಿಯು ಒಂದು ಮೈದಾನದಲ್ಲಿ ನೆಲೆಯಾಗಿದೆ. ಸುತ್ತಲೂ ಗೇಟ್‌ಗಳಿರುವ ವಸತಿ ಸಂಕೀರ್ಣಗಳಿವೆ. ಸುಸಜ್ಜಿತ ಅಪಾರ್ಟ್‌ಮೆಂಟ್‌ಗಳಿಂದ 100 ಮೀಟರ್‌ಗಳಷ್ಟೇ ದೂರದಲ್ಲಿ ಒಂದು ಮೆಟಲ್‌ಶೀಟ್ ಚಾವಣಿಯೊಂದಿಗೆ ಒಂದು ಕೋಣೆಯ ಮನೆಗಳನ್ನು ಸಾಧ್ಯವಾದಷ್ಟೂ ಒತ್ತೊತ್ತಾಗಿ ನಿರ್ಮಿಸಲಾಗಿದೆ. ಇವುಗಳನ್ನು ಧೂಳೆದ್ದ ರಸ್ತೆಗಳು ಕೂಡಿಸುತ್ತವೆ. ಸುತ್ತಮುತ್ತಲಿನ ಸ್ಥಳದಲ್ಲಿ ತಂದು ಸುರಿಯುವ ಕಸದ ದುರ್ವಾಸನೆಯೊಂದಿಗೆ, ಸಾಸುವೆ ಎಣ್ಣೆಯ ಸುವಾಸನೆ ಪೈಪೋಟಿ ನಡೆಸುತ್ತದೆ. ನಗರದ ಮತ್ತು ಸುತ್ತಲಿನ ಅಪಾರ್ಟ್‌ಮೆಂಟ್‌ನ ಕಸವನ್ನು ಒಟ್ಟುಗೂಡಿಸಿ, ಬೇರ್ಪಡಿಸಿ ಇವರ ಮನೆಯ ಬಳಿ ಸುರಿಯಲಾಗುತ್ತದೆ. ಇಲ್ಲಿ ಶೌಚಾಲಯ, ನೀರು ಮತ್ತು ವಿದ್ಯುತ್ ವ್ಯವಸ್ಥೆಗಳು ಅತಿಕಡಿಮೆ. ವಾರಕ್ಕೊಮ್ಮೆ ಬಸ್ತಿಗೆ ಬರುವ ದೊಡ್ಡ ಟ್ಯಾಂಕರ್‌ಗಳ ಮೂಲಕ ನೀರು ಪೂರೈಸಲಾಗುತ್ತದೆ. ಕೆಲವು ಕಡೆಗೆ ಮಾತ್ರ ವಿದ್ಯುತ್ ವ್ಯವಸ್ಥೆ ಇರುವುದರಿಂದ ರಾತ್ರಿ ಹೊತ್ತು ಬಸ್ತಿಯ ಬಹುತೇಕ ಭಾಗಗಳು ಕತ್ತಲಲ್ಲಿ ಮುಳುಗಿರುತ್ತವೆ. ವಲಸೆಯು ಸಂಪಾದನೆಯ ಹಲವಾರು ಅವಕಾಶಗಳನ್ನು ಸೃಷ್ಟಿಸಿದ್ದರೂ ಕಾರ್ಮಿಕರಿಗೆ ಕನಿಷ್ಠ ಮಟ್ಟದ ಜೀವನ ನಿರ್ಮಿಸುವಲ್ಲಿ ವಿಫಲವಾಗಿದೆ.

"ನಮಗೆ ಕರೆಂಟ್ ಆಗಲೀ ಅಥವಾ ನೀರಾಗಲಿ ಇಲ್ಲ. ನಮ್ಮ ಮಕ್ಕಳು ಹಲ್ಲಿಗಳಂತೆ ಸಾಯುತ್ತಿದ್ದಾರೆ"

ಈ ಬಸ್ತಿ ಮತ್ತು ಸುತ್ತಲಿನ ಅಪಾರ್ಟ್‌ಮೆಂಟ್‌ಗಳ ಜನರು ಬೇರೆ ಬೇರೆಯಾಗಿ ಕಾಣಿಸಿದರೂ, ಇವರಿಗೂ ಅವರಿಗೂ ಹತ್ತಿರದ ಸಂಬಂಧವಿದೆ. ಆ ವಸತಿ ಸಂಕೀರ್ಣಗಳನ್ನು ಕಟ್ಟಿದ್ದು, ಈ ಬಸ್ತಿಯ ಜನರ ಕೈಗಳು. ಬಸ್ತಿಯಲ್ಲಿನ ಹೆಣ್ಣುಮಕ್ಕಳು ಸುತ್ತಮುತ್ತಲ ಮನೆಗಳಲ್ಲಿ, ಮನೆಗೆಲಸ ಮತ್ತು ಅಡಿಗೆ ತಯಾರಿಸಿದರೆ, ಅವರ ಗಂಡಂದಿರು ಹತ್ತಿರದ ಶಾಲೆಗಳಲ್ಲಿ ಡ್ರೈವರ್, ಚಿಂದಿ ಆಯುವ, ಮತ್ತು ದಿನಗೂಲಿಯ ಕೆಲಸವನ್ನು ಮಾಡುತ್ತಾರೆ. ಬೇರೆಯಾರೂ ಮಾಡಲು ಬಯಸದ ಕೆಲಸಗಳನ್ನು ಈ ವಲಸೆ ಕಾರ್ಮಿಕರು ಮಾಡುತ್ತಾರೆ. ಅವರಿಲ್ಲದಿದ್ದರೆ, ಮನೆಸ್ವಚ್ಛಗೊಳಿಸುವವರು ಮತ್ತು ಅಡಿಗೆ ಮಾಡುವವರು ಯಾರು ? ಇಷ್ಟು ಬೃಹತ್ ಸಂಕೀರ್ಣಗಳನ್ನು ಕಟ್ಟುತ್ತಿದ್ದವರು ಯಾರು ? ಕಸ ಆಯ್ದು ಅದನ್ನು ಕೈಯಾರೆ ಬೇರ್ಪಡಿಸುತ್ತಿದ್ದವರು ಯಾರು ? ಅವರಿರುವ ಭೌಗೋಳಿಕ ವಲಯದಲ್ಲಿ ಅಷ್ಟು ಸಕ್ರಿಯವಾಗಿ ಮುಖ್ಯಪಾತ್ರ ವಹಿಸುತ್ತಿದ್ದರೂ ಸಹ ಅವರನ್ನು ಎರಡನೇ ದರ್ಜೆಯ ಪ್ರಜೆಗಳನ್ನಾಗಿ ನಡೆಸಿಕೊಳ್ಳಲಾಗುತ್ತಿದೆ.

"ನಾವು ಅವರ ಮನೆಗಳನ್ನು ಅಚ್ಚುಕಟ್ಟಾಗಿ ಇಟ್ಟುಕೊಳ್ಳುತ್ತೇವೆ, ಅವರ ಮನೆ ನಡೆಯುತ್ತಿರುವುದೇ ನಮ್ಮಿಂದ. ಅವರು ಮಾಡುವ ಕೆಲಸವೇನೆಂದರೆ, ಟೇಬಲ್ ಹತ್ತಿರಕೂರುವುದು, ತಿನ್ನುವುದು ಮತ್ತು ನಮ್ಮನ್ನು ಬಯ್ಯುವುದು ಇಷ್ಟೇ"

ಇಲ್ಲಿನ ಮಹಿಳೆಯರು ದಿನಪೂರ್ತಿ ದುಡಿಯುತ್ತಾರೆ. ಬೆಳಿಗ್ಗೆ 4 ಗಂಟೆಗೆ ಶುರುವಾದರೆ, ಅವರು ಮನೆಗೆ ಮರಳುವುದು ರಾತ್ರಿ 10 ಗಂಟೆಗೇ. ಹಲವಾರು ಮನೆಗಳಲ್ಲಿ ದುಡಿಯುತ್ತಾರೆ. ಒಂದೊಂದು ಮನೆಯಲ್ಲಿ ತಿಂಗಳಿಗೆ ರೂ.2000 ದಿಂದ ರೂ.5000ರ ವರೆಗೂ ಸಂಪಾದಿಸುತ್ತಾರೆ. ಕೆಲವು ಕರುಣಾಶಾಲಿಗಳಾದವರ ಮನೆಯಲ್ಲಿ ತಿಂಗಳಿಗೆ 2 ದಿನ ಬಿಡುವು ಸಿಕ್ಕರೆ ಅದೇ ಈ ಮಹಿಳೆಯರಿಗೆ ಸಿಗುವ ಸೌಭಾಗ್ಯ. ಇವರನ್ನು ಸಂವೇದನಾರಹಿತವಾಗಿಯೇ ನಡೆಸಿಕೊಳ್ಳಲಾಗುತ್ತದೆ. ಅನಾರೋಗ್ಯವಿದ್ದಾಗ, ಅಥವಾ ಮನೆಯಲ್ಲಿ ಯಾವುದಾದರೂ ಸಾವಾಗಿದ್ದರೂ


'ಬೆವರು' ಬೆಂಗಳೂರಿನಲ್ಲಿ ಇರುವಂತಹ ಕಾರ್ಮಿಕರ ದನಿ, ನೋಟ, ಮತ್ತು ಅವರ ಅನುಭವಕ್ಕೆ ಸಮರ್ಪಿತವಾಗಿದೆ.ಈ ಪತ್ರಿಕೆಯು ಅಸಂಘಟಿತ ವಲಯದ ಕಾರ್ಮಿಕರನ್ನ ಕೇಂದ್ರೀಕರಿಸಿದೆ.ಇದು ಈ ಪತ್ರಿಕೆಯ ಮೊದಲ ಸಂಚಿಕೆ, ಹಾಗಾಗಿ ನಿಮ್ಮ ಪ್ರತಿಕ್ರಿಯೆ ಸಲಹೆಗಳನ್ನ ನೀಡಿ. ಸುತ್ತಲಿರುವ ಕಾರ್ಮಿಕರನ್ನ ಕುರಿತಂತ ಬರಹ, ಹಾಡು, ಕವನ, ಚಿಂತನೆಗಳನ್ನ ದಯಮಾಡಿ ಹಂಚಿಕೊಳ್ಳಿ.

ಹೆಚ್ಚಿನ ಮಾಹಿತಿಗಾಗಿ : bevarupaseena@gmail.com ಗೆ ಬರೆಯಿರಿ ಅಥವಾ ಕರೆಮಾಡಿ 6366646052.

**ಕನ್ನಡ ಅನುವಾದ:** ಶಾಲಿನಿ ಎಂ.ಸಿ ನವಿಲೆ, ಎಂ.ಎಸ್ ಸಿದ್ಧಾರ್ಥ್, ಮಮತಾ ಯೆಜಮಾನ, ಚಿತ್ರ. ಎಸ ಐಯ್ಯರ್ ಮತ್ತು ಕಲ್ಪನಾ ಚಕ್ರವರ್ತಿ

**ವಿನ್ಯಾಸ ಮತ್ತು ರೇಖಾಚಿತ್ರಗಳು:** ಜಯಸಿಂಹ ಸಿ

*ಈ ಎಲ್ಲಾ ಲೇಖನಗಳನ್ನು ಕಾರ್ಮಿಕರ ಸಂಭಾಷಣೆಯನ್ನು ಆಧರಿಸಿ ಮರ ತಂಡದವರು ಬರೆದಿದ್ದಾರೆ.*



ಸಹ ಇವರು ಕೆಲಸಕ್ಕೆ ಬರಬೇಕೆಂದು ನಿರೀಕ್ಷಿಸಲಾಗುತ್ತದೆ.

"ನಾವು ಬೆಳಿಗ್ಗೆ ಮತ್ತು ಸಂಜೆ, ಕ್ರಮವಾಗಿ ಮಧ್ಯಾಹ್ನದ ಊಟ ಮತ್ತು ರಾತ್ರಿಯೂಟ ಸಿದ್ಧಪಡಿಸಲು ಮೂರು ಗಂಟೆಗಳ ಕಾಲ ಕೆಲಸಕ್ಕೆ ಹೋಗುತ್ತೇವೆ. ಒಂದು ವೇಳೆ ನಾವೇನಾದರೂ ವಿರಮಿಸಿದರೆ, ಕಷ್ಟಪಟ್ಟು ಕೆಲಸ ಮಾಡುವುದಿಲ್ಲ ಎಂದು ನಿಂದಿಸುತ್ತಾರೆ. ನಾವು ನೀರು ಕೇಳಿದರೆ ಕೊಡಲು ನಿರಾಕರಿಸುತ್ತಾರೆ, ನಾವೇನಾದರೂ ಕಾಲೋನಿಯಲ್ಲಿರುವ ಪಾರ್ಕ್‌ನ ಬೆಂಚ್ ಮೇಲೆ ಕುಳಿತರೆ, ನಮ್ಮನ್ನು ಅಲ್ಲಿಂದ ಓಡಿಸುತ್ತಾರೆ."

ಬಸ್ತಿಯಲ್ಲಿರುವ ಮಹಿಳೆಯರು ಅತ್ಯಂತ ಅಪಾಯದಲ್ಲಿರುತ್ತಾರೆ. ಮನೆಗೆಲಸ ಮಾಡುವಾಗ ಲೈಂಗಿಕ ಕಿರುಕುಳ ಮತ್ತು ನಿಂದನೆಗಳನ್ನು ಎದುರಿಸಬೇಕಿದೆ. ಒಂದುವೇಳೆ ಯಾರಿಗಾದರೂ ಹೇಳಿದರೆ ಅವರ ಮೇಲೆ ಕಳ್ಳತನದ ಆರೋಪ ಹೊರಿಸುತ್ತೇವೆಂದು ಬೆದರಿಸಲಾಗುತ್ತದೆ. ಸಂಜೆ ತಡವಾದಲ್ಲಿ ಕಿರುಕುಳದ ಭಯದಿಂದ ತಮ್ಮ ಸಹಯೋಗಿಗಳಿಗೆ ಕಾಯ್ದು ಒಟ್ಟಿಗೇ ಹೋಗುತ್ತಾರೆ. ಬಸ್ತಿಯೇ ಪ್ರತ್ಯೇಕವಾಗಿ ರುವುದರಿಂದ, ಅಲ್ಲಿ ವಾಸಿಸುವುದೇ ಅವರಿಗೆ ಅಪಾಯಕಾರಿಯಾಗಿ ಪರಿಣಮಿಸಿದೆ. 2017ರ ಆಗಸ್ಟ್‌ನಲ್ಲಿ ಮಹಿಳೆಯೊಬ್ಬರನ್ನು ಅಪಹ ರಿಸುವ ಪ್ರಯತ್ನವಾಗಿತ್ತು. ಹತ್ತಿರದಲ್ಲಿದ್ದ ಮಹಿಳೆಯು ಇದನ್ನು ತಿಳಿದು ಎಲ್ಲರನ್ನು ಎಚ್ಚರಿಸಿದ್ದರಿಂದ ಆಕೆ ಬಚಾವಾಗಿದ್ದಳು. ಪೊಲೀಸರ ಬೆಂಬಲ ಮತ್ತು ಯಾವುದೇ ಕ್ರಮಗಳಿಲ್ಲದಿರುವುದರಿಂದ ಅಲ್ಲಿ ಅಪಹರಣ, ಅತ್ಯಾಚಾರ ಮತ್ತು ಲೈಂಗಿಕ ಕಿರುಕುಳಗಳು ಸಾಮಾನ್ಯವಾಗಿದೆ. ಇಲ್ಲಿನ ನಿವಾಸಿಗಳಿಗೆ ಸ್ಥಳೀಯ ಭಾಷೆ ಬರದಿರುವುದರಿಂದ ಮತ್ತು ಸಾಮಾಜಿಕ ಮತ್ತು ರಾಜಕೀಯ ಅಧಿಕಾರ ಇಲ್ಲದಿರುವುದರಿಂದ ಶೋಷಣೆಗೆ ಒಳಗಾಗುತ್ತಿದ್ದಾರೆ.

ಪೊಲೀಸರು, ರಾಜಕಾರಣಿಗಳು ಮತ್ತು ಸ್ಥಳೀಯರು ಈ ವಲಸೆ ಕಾರ್ಮಿಕರನ್ನು ಹೊರಗಿನವರಂತೆ ನಡೆಸಿಕೊಳ್ಳುತ್ತಾರೆ. ವಲಸೆಗಾರರನ್ನು ಆಗಾಗ ಪರೀಕ್ಷಿಸುವ ನೆಪದಲ್ಲಿ ಪೊಲೀಸರು ನಿರಂತರವಾಗಿ ಕಿರುಕುಳ ನೀಡುತ್ತಾರೆ. ಭಾರತೀಯರಾಗಿರಲಿ, ಹೊರಗಿನವರಾಗಿರಲಿ, ತಮ್ಮ ವಸತಿ ಮತ್ತು ಜೀವನ ಕಳೆದುಕೊಳ್ಳುವ ನಿರಂತರ ಭಯದಲ್ಲಿ ಬದುಕಬೇಕಾಗಿದೆ. ಇದೇ ಭಯವನ್ನು ಉಪಯೋಗಿಸಿ, ಪೊಲೀಸರು ಬೆದರಿಸಿ, ಹೆದರಿಸಿ ಇವರಿಂದ ದುಡ್ಡು ಕೀಳುತ್ತಾರೆ. ಇವರೆಲ್ಲರೂ ಬಾಂಗ್ಲಾದೇಶದ ಮುಸ್ಲಿಮರೆಂದು ಹೆಸರಿಸಿ 2018ರ ಡಿಸೆಂಬರ್‌ನಲ್ಲಿ ಇವರೆಲ್ಲರನ್ನು ತೆರವುಗೊಳಿಸಬೇಕೆಂದು ಅಲ್ಲಿನ ಶಾಸಕ ಅರವಿಂದ ಲಿಂಬಾವಳಿಯ ಕಡೆಯಿಂದ ನೋಟೀಸ್ ನೀಡಲಾಗಿತ್ತು. 15 ವರ್ಷಗಳಿಂದ ಇಲ್ಲಿ ಸಹಬಾಳ್ವೆಯಿಂದ ಜೀವನ ನಡೆಸುತ್ತಿದ್ದ, ಯಾರೂ ಮಾಡಲೊಪ್ಪದ ಕೆಲಸವನ್ನು ಮಾಡುತ್ತಿದ್ದ ಜನರು ಒಮ್ಮಿಂದೊಮ್ಮೆಲೆ 'ಅಪಾಯಕಾರಿ'ಯಾದರು. 2017ರಲ್ಲಿ ಬಶೀರ್ ಉಲ್ ಶೇಖ್‌ಸ್ಥಳೀಯರಿಂದಲೇ ಹತ್ಯೆಗೊಂಡಿದ್ದರು. ಅವರು ವಲಸಿಗರು, ಎಲೆಕ್ಟ್ರಾನಿಕ್ ಕೇಬಲ್‌ಗಳನ್ನು ಕದಿಯುತ್ತಿದ್ದರು ಎಂದು ಆರೋಪಿಸಲಾಗಿತ್ತು. ಅವರು ಕೇಬಲ್ ಕಳ್ಳತನ ಮಾಡಿದ್ದರು ಎಂದು ಜಾಹೀರು ಪಡಿಸಲು ಅವರ ದೇಹವನ್ನು ಎಲೆಕ್ಟ್ರಿಕಲ್ ಕೇಬಲ್‌ನಿಂದಲೇ ಸುತ್ತಿ ಶಾಕ್ ನೀಡಲಾಗಿತ್ತು.

ತುಬರನಹಳ್ಳಿಯಲ್ಲಿ ವಲಸೆ ಬಂದವರು ಬಹುತೇಕರು ಮುಸ್ಲಿಮರಾದ್ದರಿಂದ, ಇದು ಅವರ ಶೋಷಣೆಗೆ ಮತ್ತೊಂದು ಪದರವನ್ನು ಹಾಕುತ್ತದೆ. ದೇಶಾದ್ಯಂತ ಮುಸ್ಲಿಮರನ್ನು ಗಲಭೆ, ದೌರ್ಜನ್ಯಕ್ಕೆ ಗುರಿಪಡಿಸಲಾಗಿದೆ ಹಾಗು ಸರ್ಕಾರಿ ನೀತಿಗಳು ಅವರನ್ನು ಅವರ ಮನೆಯಿಂದ ಹೊರಹಾಕಲು ಗುರಿಪಡಿಸುತ್ತದೆ. ಭಾರತ ಸರ್ಕಾರದ NRC (National Register of Citizens ಎಂಬ ಪ್ರಕ್ರಿಯೆಯು ಅವರು ತೀರ್ಮಾನಿಸಿದ ಅಕ್ರಮ ನಾಗರಿಕರನ್ನು ಹೊರಗಟ್ಟುವ ಉದ್ದೇಶ ಹೊಂದಿದೆ. ಪ್ರಸ್ತುತ, NRCಯು ಬಂಗಾಳದ ಹತ್ತಿರದ ಅಸ್ಸಾಂನಲ್ಲಿ ಬಳಸಲಾಗಿದ್ದು ಅಲ್ಲಿನ ಮುಸ್ಲಿಮರನ್ನು ಹೆಚ್ಚಾಗಿ ಅಕ್ರಮವಲಸೆಗಾರರೆಂದು ಆರೋಪಿಸಲಾಗಿದೆ. ಓಖಅಮೂಲಕ ನಿಯತರಾದ ಹಿಂದೂಗಳನ್ನು ಪೌರತ್ವ ತಿದ್ದುಪಡಿ ಮಸೂದೆ (Citizenship Amendment Bill) ಅಡಿ ರಕ್ಷಿಸಲಾಗುತ್ತದೆ. ಅವರು ಮುಸ್ಲಿಮರಾಗದೆ ಹಿಂದೂಗಳಾದ ಏಕೈಕ ಕಾರಣದಿಂದ ಅವರನ್ನು ರಕ್ಷಿಸಲಾಗುತ್ತಿದೆ. ಈಗ ಓಖಅಯು ಬೆಂಗಳೂರಿಗೂ ಬರುತ್ತಿದೆ. ಇಲ್ಲಿನ ಮುಸ್ಲಿಂ ವಲಸೆಗಾರರ ಮನೆ ಮತ್ತೊಮ್ಮೆ ಅಪಾಯದಲ್ಲಿದೆ.

ತುಬರನಹಳ್ಳಿಯ ಮುಸ್ಲಿಂ ವಲಸೆಗಾರರನ್ನು ಶೋಷಿಸಲಾಗುತ್ತಿದೆ, ಕಿರುಕುಳ ನೀಡಲಾಗುತ್ತಿದೆ, ಅಗೌರವದಿಂದ ಕಾಣಲಾಗುತ್ತಿದೆ, ದೂಷಿಸಲಾಗುತ್ತಿದೆ ಮತ್ತು ಹೊರಗಿನವನಾಗಿಯೇ ಇರಬೇಕೆಂದು ಬಲವಂತ ಮಾಡಲಾಗುತ್ತಿದೆ. ತುಬರನ ಹಳ್ಳಿಯಲ್ಲಿ ಮುಸ್ಲಿಮ ವಲಸೆಗಾರರು 15 ವರ್ಷದಿಂದ ಅಲ್ಲಿ ವಾಸವಾಗಿದ್ದಾರೆ. ಅವರು ನಗರದ ಕಚರೆಯನ್ನು ಕೈಯಿಂದ ಬೇರ್ಪಡಿಸುತ್ತಾರೆ, ನಾವು ನಡೆಯುವ ಬೀದಿಯನ್ನು ಸ್ವಚ್ಛವಾಗಿರಿಸುತ್ತಾರೆ, ಮನೆ ಕಟ್ಟುತ್ತಾರೆ, ಕಟ್ಟಿದ ಮನೆಯನ್ನು ಶುಚಿಗೊಳಿಸುತ್ತಾರೆ, ಮಕ್ಕಳನ್ನು ನೋಡಿಕೊಳ್ಳುತ್ತಾರೆ. ಬೇರೆ ಯಾರೂ ಮಾಡದ ಕೆಲಸಕಾರ್ಯವನ್ನು ಮಾಡುತ್ತಾರೆ. ಈ ನಿವಾಸಿಗಳು ನಿಮ್ಮ ನಗರಕ್ಕೆ ಕೊಡುಗೆ ನೀಡುವ ಸದಸ್ಯರಾಗಿದ್ದಾರೆ. ಹೊರಗಿನವನು ಎಂಬ ಸುಳ್ಳಿನ ಆಧಾರದ ಮೇಲೆ ಅವರ ಜೀವನ, ಯೋಗಕ್ಷೇಮ, ಘನತೆಗೆ ಹಾನಿ ಆಗಬಾರದು.

*2019ರ ಅಕ್ಟೋಬರ್ 27ರಂದು (ಈ ಲೇಖನ ಬರೆದಾದ ನಂತರ) 29 ಗಂಡಸರು, 22 ಹೆಂಗಸರು ಮತ್ತು 9 ಮಕ್ಕಳನ್ನು ಅಕ್ರಮ ಬಾಂಗ್ಲಾದೇಶಿ ವಲಸೆಗಾರರೆಂಬ ಆಧಾರದ ಮೇಲೆ ಬೆಂಗಳೂರಿನಲ್ಲಿ ಬಂಧಿಸಲಾಗಿದೆ. ಇವರು ಬೀದಿ ಸ್ವಚ್ಛವಾಗಿರಿಸುವ, ತ್ಯಾಜ್ಯ ಬೇರ್ಪಡಿಸುವ, ಮನೆಯನ್ನು ಸ್ವಚ್ಛ ವಾಗಿರಿಸುವ, ಮಕ್ಕಳನ್ನು ನೋಡಿ ಕೊಳ್ಳುವ ವ್ಯಕ್ತಿಗಳು. ನಾವು ಈ ಬಂಧನಗಳನ್ನು ಖಂಡಿಸುತ್ತೇವೆ ಮತ್ತು ಬಂಧನಕ್ಕೊಳಗಾದವರ ಜೊತೆ ನಿಲ್ಲುತ್ತೇವೆ.

# ಇದು ನಮ್ಮ ಸ್ಥಳವೂ ಹೌದು

*"ಒಮ್ಮೆ ಅವರು ಕೆಲಸ ಮಾಡದಿದ್ದಾಗ ತಲೆ ಕೆಟ್ಟು, ಹುಚ್ಚರಂತಾಗಿದ್ದರು. ಹೇಗೋ ಗುಣಗೊಂಡು ಕೆಲಸಕ್ಕೆ ಮರಳಿದರು. ಅದೊಂದೇ ಅವರನ್ನು ಮರಳುತನದಿಂದ ಕಾಪಾಡುತ್ತಿರುವುದು. ಈಗ ಮತ್ತೊಮ್ಮೆ ಅವರಿಗೆ ಕೆಲಸವಿಲ್ಲ."* 20 ವರ್ಷಗಳ ನಂತರ ಪೌರಕಾರ್ಮಿಕನ ಕೆಲಸದಿಂದ ವಜಾಗೊಂಡ ಶಶಿಕುಮಾರವರ ಬಗ್ಗೆ ಅವರ ಪೌರಕಾರ್ಮಿಕ ಮಗಳು ಮೀನಾ, ದುಃಖ ವ್ಯಕ್ತಪಡಿಸಿದ್ದಾರೆ.

ಶಶಿಕುಮಾರ (60 ವರ್ಷ) ಬೆಂಗಳೂರಿನಲ್ಲಿ 50 ರುಪಾಯಿಗೆ ಲಾರಿಯ ಕಸ ಸಂಗ್ರಾಹಕನಾಗಿ ಕೆಲಸ ಶುರುಮಾಡಿದರು. ಕಳೆದ 20 ವರ್ಷಗಳಲ್ಲಿ, ಉತ್ತಮ ವೇತನಕ್ಕಾಗಿ ಹೋರಾಡಿದ ನಂತರ, ಅವರ ಸಂಬಳ 13000 ಏರಿತು. ಇದ್ದಕ್ಕಿದ್ದಂತೆ ಅವರಿಗೆ ಕೆಲಸಕ್ಕೆ ಬಾರದಂತೆ ಆದೇಶಿಸಲಾಗಿದೆ, ಅಲ್ಲದೆ ಎರಡು ತಿಂಗಳ ಸಂಬಳವನ್ನೂ ನೀಡಬೇಕಾಗಿದೆ.

*"ನಮ್ಮ ತಂದೆ ತಾಯಿ ಕೆಲಸ ಮಾಡುವುದನ್ನು ಬಿಟ್ಟರೆ, ಅವರ ಮಕ್ಕಳು ಮರಿಗಳು ಕೆಲಸಕ್ಕೆ ಹೋಗಬೇಕು, ಇಲ್ಲದಿದ್ದರೆ ನಾವು ಹೇಗೆ ಬದುಕಬಲ್ಲೆವು"*ಎಂದು ಪ್ರಶ್ನಿಸುತ್ತಾರೆ ಮೀನಾ.

ಶೋಷಿತ ಗುತ್ತಿಗೆ ಗೂಳಿಯ ವ್ಯವಸ್ಥೆಯಿಂದಾಗಿ, ಪೌರಕಾರ್ಮಿಕರು ವೇತನದಿಂದ ಹಿಡಿದು ಘನತೆಯವರೆಗೆ, ಪ್ರತಿಯೊಂದು ಸಣ್ಣ ಪುಟ್ಟ ವಿಚಾರಕ್ಕಾಗಿ ಹೋರಾಟ ನಡೆಸಿಕೊಂಡು



ಬಂದಿದ್ದಾರೆ. ಒಂದು ವರ್ಷಕ್ಕಿಂತ ಕಡಿಮೆ ಅನುಭವವಿರುವ ಪೌರಕಾರ್ಮಿಕರನ್ನು 2018ರ ಜನವರಿಯಲ್ಲಿ ವಜಾ ಮಾಡ ಲಾಯಿತು. ಮೇ 2019ರಿಂದ 60ಕ್ಕಿಂತ ಹೆಚ್ಚು ವಯಸ್ಸಾದವರನ್ನು ಯಾವುದೇ ಮುನ್ಸೂಚನೆಯಿಲ್ಲದೆ ಕೆಲಸದಿಂದ ತೆಗೆದು ಹಾಕಲಾಯಿತು; ಅವರಿಗೆ ಯಾವುದೇ ರೀತಿಯ ಭವಿಷ್ಯ ನಿಧಿ (PF) ಅಥವಾ ನಿವೃತ್ತಿಯ ಸೌಲಭ್ಯವನ್ನು ನೀಡಲಾಗಲಿಲ್ಲ. ಪ್ರಕಟಣೆಯು ಅರ್ಜಿದಾರರಿಗೆ 45 ವರ್ಷದ ಮಿತಿಯನ್ನು ನಿಗದಿಪಡಿಸಿದೆ. ಇದರಿಂದಾಗಿ 20 30 ವರ್ಷದ ಅನುಭವವಿರುವ ಪೌರಕಾರ್ಮಿಕರು ವಯಸ್ಸಿನ ಕಾರಣವಾಗಿ ಅರ್ಜಿ ಸಲ್ಲಿಸಲಾಗುತ್ತಿಲ್ಲ. ಶಶಿಕುಮಾರವರು ಹೋಟೆಲು ಮತ್ತು ಮನೆಯಲ್ಲಿ ಉತ್ಪತ್ತಿಯಾಗುವ ಎಲ್ಲಾ ತರಹದ ತ್ಯಾಜ್ಯವನ್ನು ತೆರವುಗೊಳಿಸುತ್ತಾರೆ. 8 ಗಂಟೆಗಳ ಕಾಲ ಕಸದೊಂದಿಗೆ ಕೆಲಸ ಮಾಡಿದ ನಂತರ ಒಂದು ಮದ್ಯಪಾನ ಮಾಡಿದರೆ ಎಲ್ಲಾ ತರಹದ ದೃಶ್ಯ, ವಾಸನೆ ಮತ್ತು ಸದ್ದು ಮರೆತು ಹೋಗುತ್ತದೆ. ಇಂದು, ಕಸದ ರಾಶಿಯಿಂದ ಪ್ಲಾಸ್ಟಿಕ್ ಮತ್ತು ಟಿನ್ ಹೆಕ್ಕಿ ಮರುಬಳಕೆಯ ಅಂಗಡಿಗಳಿಗೆ ಮಾರಿ 100 ರುಪಾಯಿ ಸಂಪಾದಿಸುತ್ತಾರೆ. "ಅವರಿಗೆ ಸ್ವಾಭಿ ಮಾನದಿಂದ ಬದುಕಲು ಇಷ್ಟ, ಊಟ ನೀರಿಗಾಗಿ ಕೈಚಾಚಲು ಇಷ್ಟವಿಲ್ಲ. ಸ್ವಾವ ಲಂಬಿಯಾಗಲು ಮಾತ್ರ ಈ ಕೆಲಸ ಮಾಡುತ್ತಾರೆ"ಎಂದು ಮೀನಾ ಒಪ್ಪಿಕೊಂಡರು. ಇಷ್ಟು ವರ್ಷ ಶ್ರದ್ಧೆಯಿಂದ ಕೆಲಸ ಮಾಡಿ ಏನು ಪ್ರಯೋಜನ? ಅವರಿಗೆ ಯಾವುದೇ ರೀತಿಯ ನಿವೃತ್ತಿ ವೇತನ ಅಥವಾ ಸೌಲಭ್ಯ ಸಿಗುತ್ತಿಲ್ಲ, ಮತ್ತು ಮಕ್ಕಳ ಓದಿಗಾಗಿ, ಕೆಲಸಕ್ಕಾಗಿ ಸಹಾಯವಿಲ್ಲ. ನಾಲ್ಕು ತಲೆಮಾರುಗಳಿಂದ ಮೀನಾರ ಕುಟುಂಬ ಪೌರಕಾರ್ಮಿಕರಾಗಿ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದಾರೆ.

"ನಾವೇನು ಸರ್ಕಾರದ ಗುಲಾಮರೇ? ನಮ್ಮ ತಂದೆ ತಾಯಿಯನ್ನು ಈ ಸ್ಥಿತಿಯಲ್ಲಿ ನೋಡಲಿಕ್ಕೇನು, ಪೀಳಿಗೆಯ ನಂತರ ಪೀಳಿಗೆ, ಈ ನಗರವನ್ನು ಸ್ವಚ್ಛವಾಗಿರಿಸಿದ್ದು? ಇದು ಹಣದ ವಿಷಯವಲ್ಲ, ಘನತೆಯದು. ನಾವು ಇಷ್ಟು ವರ್ಷ ಬೆವರು ಸುರಿಸಿದ್ದೇವೆ, ಈಗ ಗೌರವಕ್ಕಾಗಿ ಕೆಲಸ ಮಾಡಬೇಕೆ? ನಮ್ಮ ಭವಿಷ್ಯವೂ ಹೀಗೆ ಇರುವುದೇ?" ಎಂದು ಪ್ರಶ್ನಿಸುತ್ತಾರೆ ಮೀನಾ.

ಪೌರಕಾರ್ಮಿಕರು, ಪ್ರಬಲವಾದ ಮಹಿಳೆಯರು

ಅವರು ಸ್ವಚ್ಛಗೊಳಿಸುವ ಸ್ಥಳದ ಮೇಲೆ ಹಕ್ಕು ಇರಿಸಿಕೊಳ್ಳುತ್ತಾರೆ. ಅವರಿಗೆ ಮನೆಯಲ್ಲಿದ್ದು ಅಭ್ಯಾಸವಿಲ್ಲ. ತಮ್ಮ ತಮ್ಮ ಕಾರ್ಯಕ್ಷೇತ್ರಕ್ಕೆ ಅವರು ಒಗ್ಗಿಹೋಗಿದ್ದಾರೆ. ಜೀವನ ಭೀಮನಗರದಲ್ಲಿ, ಬೆಳಗಾಗುವಷ್ಟ ರಲ್ಲಿ ಹನ್ನೊಂದು ಮಹಿಳೆ ಯರನ್ನು ವಜಾ ಮಾಡಲಾಯಿತು. "ಒಬ್ಬರಿಗೆ ತಲೆ ಕೆಟ್ಟಂತಾಗಿದೆ. ಇನ್ನೊರು ಬೇರೆಯವರ ಮನೆ ಯಲ್ಲಿ ಕೆಲಸ ಹುಡುಕಲು ಪ್ರಯತ್ನ ಪಟ್ಟರು, ಆದರೆ ಅವರು ಕಸ ಎತ್ತುವವರೆಂದು, ಅವರನ್ನು ಯಾರೂ ಮನೆಕೆಲಸಕ್ಕೆಂದು ಒಪ್ಪಿ ಕೊಳ್ಳುತ್ತಿಲ್ಲ. ಈಗ ಆಕೆ ಕೂಡ ಚಿಂದಿ ಮಾರಾ ಟಗಾರರಾಗಿ ಕೆಲಸ ಮಾಡುತ್ತಿದ್ದಾರೆ. ಬೇರೆ ಯವರದ್ದು ಇದೇ ಪಾಡಾಗಿದೆ. ಕೆಲಸ ವಿಲ್ಲದ ಒಂದು ದಿನವನ್ನೂ ಅವರಿಂದ ಊಹಿಸ ಲಾಗುವುದಿಲ್ಲ. ಈ ಜಾಗ ಅವರದ್ದೂ ಹೌದು, ಇದರ ಮೇಲೆ ಅವರದ್ದೂ ಹಕ್ಕಿದೆ"ಎಂದು ರೋಷದಿಂದ ನುಡಿದರು ಮೀನಾ.

ಇಂದು ಮೀನಾ ಡೆಂಗಿಯಿಂದ ಬಳಲುತ್ತಿದ್ದಾರೆ. "ನಾನು ರಜೆ ತೆಗೆದುಕೊಂಡರೆ ನನ್ನ ವೇತನದಲ್ಲಿ ಕಡಿತವಾಗುತ್ತದೆ. 13000 ಸಂಬಳವಾದರೆ, ಕೇವಲ 7500 ರುಪಾಯಿ ಸಿಗುತ್ತದೆ. ಇದರಲ್ಲಿ ವಿದ್ಯುತ್, ನೀರು, ಊಟ, ಶಾಲಾ ಶುಲ್ಕವನ್ನು ಹೇಗೆ ನಿಭಾಯಿಸಲಿ?" ಆಕೆ ಈಗ ಕೆಲಸದಲ್ಲಿದ್ದಾಳೆ, ಏನೂ ತಿಂದಿಲ್ಲ, ಯಾವ ಔಷಧಿಯನ್ನೂ ತೆಗೆದುಕೊಂಡಿಲ್ಲ. "ಇಂದು ನನಗೆ ಹುಷಾರಿಲ್ಲದಿದ್ದರಿಂದ ನನ್ನ ತಂದೆ ಸಹಾಯ ಮಾಡಲು ಬಂದಿದ್ದಾರೆ. ಆಕೆಯ ತಂದೆ ಕಸದ ದೊಡ್ಡ ಬಂಡಿಯನ್ನು ತಳ್ಳುವಾಗ ಆಕೆ ಮುಗುಳ್ನಗೆ ಬೀರುತ್ತಾಳೆ.

ಇಲ್ಲಿಯವರೆಗೆ ಯಾವುದೇ ಪೌರಕಾರ್ಮಿಕರು ಶಾಶ್ವತ ಉದ್ಯೋಗಕ್ಕೆಂದು ಅರ್ಜಿ ಸಲ್ಲಿಸಿಲ್ಲ. "*ನಮ್ಮ ಬಳಿ ಜಾತಿ, ಆದಾಯ ಮತ್ತು ಶಾಲಾ ಪ್ರಮಾಣಪತ್ರವಿದೆಯೆಂದು ಸರ್ಕಾರ ಭಾವಿ ಸುತ್ತದೆಯೇ? ನಮ್ಮ ಬಳಿಯೇನು ಶಾಶ್ವ ತವಾದ ವಿಳಾಸವಿದೆಯೇ? ಈ ಶಾಶ್ವತ ಉದ್ಯೋಗಗಳೆಲ್ಲ ಯಾರಿಗಾಗಿ?*" ಆಕೆ ತನ್ನ ತಂದೆ ಮತು ಗೆಳತಿಯರ ಪರವಾಗಿ ಕಾರ್ಮಿಕ ನ್ಯಾಲಯದಲ್ಲಿ ಕೇಸು ದಾಖಲಿಸಲು ಮನಸ್ಸು ಮಾಡಿದ್ದಾರೆ. "ನಮಗೆ ಉತ್ತರ ನೀಡಿದ ಬಳಿಕ ಕೆಲಸಗಳನ್ನು ಶಾಶ್ವತಗೊಳಿಸಲಿ."

# ಎಷ್ಟೊಂದು ಸೀರೆಗಳು

ಹಾಸಿಗೆಯಿಂದ ಎದ್ದೇಳುತ್ತಾ ತನ್ನ ನೈಟ್ ಗೌನ್ ಅನ್ನು ಸರಿಪಡಿಸಿಕೊಳ್ಳುತ್ತಾಳೆ. ಈಕೆ ತಾಯಿ, ಎರಗಿಬಂದ ಮಕ್ಕಳನ್ನು ಶಾಲೆಗೆಂದು ತಯಾರಿಸಿ ಕಳುಹಿಸುತ್ತಾಳೆ. ಅವಳು ಒಬ್ಬ ಜವಾಬ್ದಾರಿಯುತ ತಾಯಿ. ನಂತರ ಸೀರೆ ಬದಲಾಯಿಸುತ್ತಾಳೆ .


ಅವಳ ಮಕ್ಕಳು ಅವಳನ್ನು ತುಂಬಾ ಪ್ರೀತಿಸುತ್ತಾರೆ. ಅಮ್ಮ ಗೊತ್ತಿಲ್ಲದ ಒಂದು ಅಂಗಡಿಯಲ್ಲಿ ಮಾರಾಟ ಮಾಡುತ್ತಾಳೆ ಎಂದು ಭಾವಿಸುತ್ತಾರೆ. ಅವಳ ಮಕ್ಕಳು ಅವಳ ಬಗ್ಗೆ ಕಾಳಜಿ ತೋರಿಸುತ್ತಾರೆ. ಮಕ್ಕಳೆದುರು ತನ್ನ ಪ್ರಯಾಸವನ್ನು ಮರೆಮಾಚುತ್ತಾಳೆ. ಮಕ್ಕಳು ಕೂಡ ಅವಳನ್ನು ಎಂದೂ ಪ್ರಶ್ನಿಸುವುದಿಲ್ಲ. ಅಂತಹ ಅದ್ಭುತ ನಟಿ ಆಕೆ.

ಶೃಂಗಾರದ ಹಿಂದೆ ಬಚ್ಚಿಟ್ಟುಕೊಂಡರೆ ಆಕೆ ಯಾರೆಂದು ಯಾರಿಗೂ ಹೇಳಲಾಗುವುದಿಲ್ಲ. ರಸ್ತೆ ಬೀದಿಯಿಂದ ವಸತಿಗೃಹ, ವಸತಿಗೃಹದಿಂದ ರಸ್ತೆಯವರೆಗೆ, ಅವಳು ಎಲ್ಲಾ ತರಹದ ಗಂಡಸರನ್ನು ನೋಡಿದ್ದಾಳೆ. ಕೋಣೆಯನ್ನು ಪ್ರವೇಶಿಸುವಾಗ, ತನ್ನ ಕಟ್ಟಿದ ಕೂದಲನ್ನು ಬಿಚ್ಚುತ್ತಾಳೆ. ತನ್ನ ಕಾರ್ಯವನ್ನು ಮುಗಿಸುತ್ತಾಳೆ. ಅವಳ ಬಾಳಿನ ಬಗ್ಗೆ ಯೋಚಿಸುತ್ತಾಳೆ. ಮತ್ತೆ ಅವಳು ಸೀರೆಯನ್ನು ಬದಲಾಯಿಸುತ್ತಾಳೆ.

ಪುರುಷರಿಗೆ ಆಕೆ ಸೌಂದರ್ಯವತಿ. ಕೆಲವರಿಗೆ ಅವಳನ್ನು ಮನೆಗೆ ಕರೆದೊಯ್ಯುವ ಆಸೆ, ಮದುವೆಯಾಗುವ ಆಸೆ, ಅವಳ ಒಡೆ ಯನಾಗುವ ಆಸೆ. ಕೆಲವರಿಗೆ ಅವಳು ಕೇವಲ ಕಾಲಹರಣಣವಷ್ಟೇ. ಆದರೆ ಅವಳು ಮಾತ್ರ ಯಾರನ್ನೂ ತನ್ನ ಜೀವನದೊಳಗೆ ಬಿಟ್ಟುಕೊಳ್ಳುವುದಿಲ್ಲ. ಅವಳ ಇರುಳ ಜೀವನದೆಡೆಗೆ ಯಾರನ್ನೂ ಸುಳಿಯಲು ಬಿಡುವುದಿಲ್ಲ.

ದಿನದಂತ್ಯದಲ್ಲಿ ಅವಳು ಮನೆಗೆ ಹಿಂದಿ ರುಗುವಾಗ, ಒಬ್ಬವಾ ತಂಡ ನಗರವನ್ನು ಶುಚಿಗೊಳಿಸುತ್ತಿರುವುದನ್ನು ಕಾಣುತ್ತಾಳೆ. ಅವಳಿಗೆ ತಿಳಿಯದೆ ಆಕೆ ಬಹಳ ಬೇಡಿ ಕೆಯಲ್ಲಿದ್ದಾಳೆ. ರಣಹದ್ದುಗಳಂತೆ ಹುಡುಕಿ, ಅವಳು ಸಿಕ್ಕರೆ, ಬಹಿರಂಗವಾಗಿ ಆಕೆಯನ್ನು ಹೀಯಾಳಿಸುತ್ತಾರೆ.

ಅವಳು ತನ್ನ ಕುಟುಂಬದ ಬಗ್ಗೆ ಯೋಚಿಸುತ್ತಾಳೆ.



ಇದೇ ಗುಂಪು ಅವಳಿಂದ ಉಚಿತ ಸೇವೆಯನ್ನು ಕೇಳುತ್ತದೆ.

ಅವಳು ತನ್ನ ಮೇಕಪ್ ಅನ್ನು ಒರೆಸಿ ಕೊಳ್ಳುತ್ತಾಳೆ. ಸಾಕಷ್ಟು ದಣಿದಿದ್ದಾಳೆ. ಮಕ್ಕಳಿಗಾಗಿ ಅಡುಗೆ ಮಾಡಲೆಂದು ಸರಸರನೆ ಮನೆಗೆ ವಾಪಸ್ಸಾಗುತ್ತಾಳೆ. ಮಕ್ಕಳನ್ನು ಮಲಗಿಸುತ್ತಾಳೆ. ತನ್ನ ಬಳೆಗಳನ್ನು ಮತ್ತು ತಾಳಿಯನ್ನು ನೋಡುತ್ತಾಳೆ. ನಿಶ್ಶಬ್ದದ ನಗೆ ಬೀರುತ್ತಾಳೆ. ಅವಳ ಕನಸುಗಳ ಬಗ್ಗೆ ಯೋಚಿಸುತ್ತಾಳೆ.

ಮತ್ತೆ ಎದ್ದು ಸೀರೆ ಬದಲಾಯಿಸುತ್ತಾಳೆ.

# ನಿರ್ಬಂಧಿತ ಪ್ರವೇಶ

“ಸಿಂಹಗಳ ಗುಂಪೊಂದು ಘರ್ಜಸಿದಂತಾಗುತ್ತದೆ. ನಿಷ್ಕರುಣೆಯಿಂದ ಈ ಘರ್ಜನೆಯು ಜೋರಾಗುತ್ತದೆ.”

*ಗಾರ್ಮೆಂಟ್ ಕಾರ್ಖಾನೆಯ ಶಬ್ದವನ್ನು ಕಾರ್ಮಿಕರೊಬ್ಬರು ಹೀಗೆ ವರ್ಣಿಸುತ್ತಾರೆ.

ಕಾರ್ಖಾನೆಗಳನ್ನು ತಲುಪಲು, ದಿನನಿತ್ಯ ನಗರದ ಹೊರವಲಯದವರೆಗೂ ಪ್ರಯಾಣ ಮಾಡಬೇಕು. ಮೆಟ್ರೋ ದುಬಾರಿಯಾದ್ದರಿಂದ, ಸಾಮಾನ್ಯವಾಗಿ ನಾವು ಬಸ್ಸಿನಲ್ಲೇ ಪ್ರಯಾಣಿಸುತ್ತೇವೆ. ನಮ್ಮಲ್ಲಿ, ಕೆಲವರಿಗೆ ಹೋಗಿ ಬರಲು 2 ಗಂಟೆಗಳ ಕಾಲ ಸಮಯ ಬೇಕಾಗುತ್ತದೆ .

ಮೂರು ನಾಲ್ಕು ಮಹಡಿ ಎತ್ತರದ ಈ ಕಾರ್ಖಾನೆಗಳ ಕಿರಿದಾದ ಕಿಟಕಿಗಳು ಮುಚ್ಚಿರುತ್ತವೆ. ಸುತ್ತ, ಕಾಂಪೌಂಡ್ ಗೋಡೆಯಿದ್ದು, ಅದರ ಮೇಲೆ ಮಿನುಗುವ, ಸುರುಳಿದ ಮುಳ್ಳುತಂತಿ ಈ ಭದ್ರಕೋಟೆಯ ಕಾವಲು. ಕಾರ್ಖಾನೆಯ ದ್ವಾರದ ಬಳಿ ನಾವು ಸಮಯ ಮತ್ತು ದಿನಾಂಕವನ್ನು ನಮೂದಿಸಬೇಕು. ಹೀಗೆ ಮಾಡದಿದ್ದಲ್ಲಿ ನಮ್ಮ ಸಂಬಳ ಕಡಿತಗೊಳ್ಳುವ ಸಂಭವವಿರುತ್ತದೆ .

ವಿಶಾಲವಾದ ಕೋಣೆಯನ್ನು ಪ್ರವೇಶಿಸಿದಾಗ ಕಣ್ಣು ಕುಕ್ಕುವ ಹೊಳೆಯುವ ಬಿಳಿ ಟ್ಯೂಬ್ ಲೈಟ್‌ಗಳು ನಮ್ಮನ್ನು ಸ್ವಾಗತಿಸುತ್ತವೆ. ಸೂರ್ಯನ ಕಿರಣಗಳನ್ನು ಒಳಗೆ ಬಿಡದೆ ಇಡೀ ಕೋಣೆಯನ್ನು ಈ ಲೈಟ್‌ಗಳು ಆಕ್ರಮಿಸುತ್ತವೆ. ತಂಗಾಳಿಯಿಲ್ಲದೆ ಕೇವಲ ಲೋಹದ ಸೂಜಿ, ಗುಂಡಿ, ಜಿಪ್, ಕತ್ತರಿ – ಈ ವಾಸನಗಳೇ ನಮ್ಮ ಮೂಗನ್ನು ಆವರಿಸುತ್ತವೆ. ಚುಚ್ಚುವ ಬೆಳಕಿಗೆ ನಮ್ಮ ಕಣ್ಣುಗಳು ಒಗ್ಗಿಕೊಂಡಾಗ, ಸಾಲು ಸಾಲಾಗಿರುವ ಮೇಜುಗಳು ಕಂಡುಬರುತ್ತವೆ. ಒಂದೇ ರೀತಿಯ ಇಪ್ಪತ್ತು ಮೇಜುಗಳನ್ನು ಐವತ್ತು ಸಾಲುಗಳೊಂದಿಗೆ ಗುಣಿಸಿ ಜೋಡಿಸಲಾಗಿದೆ. ತಲೆಬಾಗಿ ಹೊಲಿಗೆ ಯಂತ್ರದಲ್ಲಿ ಕತ್ತರಿಸುವ, ಅಳೆಯುವ, ಹೊಲೆಯುವ ಕೆಲಸವನ್ನು ಮಾಡ ತೊಡಗುತ್ತೇವೆ. ಕೈಗಳು ಚುರುಕಾಗಿ ಚಲಿಸುತ್ತವೆ, ಬಟ್ಟೆಗಳು ಸರಸರ ಸದ್ದು ಮಾಡುತ್ತಾ ಸಾಲಿನ ಕೆಳಗೆ ಹಾದುಹೋಗುತ್ತವೆ. ಸಾಲಿನ ಕೊನೆಗೆ ತಲುಪಿ ಪ್ಲಾಸ್ಟಿಕ್ ಕವರ್‌ನಲ್ಲಿ ಮುಚ್ಚಲ್ಪಡುತ್ತವೆ. ಈ ಪ್ರಕ್ರಿಯೆಯ ಮೇಲೆ ಮೇಲ್ವಿಚಾರಕರು ನಿಗಾ ಇಡುತ್ತಾರೆ. ಆತ ಕಾಣದಿದ್ದರೂ ಆತನ ಧ್ವನಿ ಸದಾ ಕೇಳಿಸುತ್ತದೆ. ಮೆಗಾಫೋನ್ನಂತಿರುವುದು ಆತನ ಧ್ವನಿ ಆಜ್ಞಿಸುತ್ತ, ಹೊಡೆಯುತ್ತ, ಅವಮಾನಿಸುತ್ತ ದಾಪುಗಾಲು ಹಾಕುತ್ತಾನೆ. ಮನುಷ್ಯನ ತಪ್ಪುಗಳಿಗೆ ಜಾಗವಿಲ್ಲ ಇಲ್ಲಿ; ಇಲ್ಲಿ ನಮ್ಮ ದೇಹ ಒಂದು ಯಂತ್ರ ಮಾತ್ರ.

ಬೆಳಗ್ಗೆ 9ರಿಂದ ಸಂಜೆ 6ರವರೆಗಿನ ಕೆಲಸದಿಂದ, ಕುತ್ತಿಗೆಯಲ್ಲಿ ನೋವು ಶುರುವಾಗುತ್ತದೆ. ಜಿಗುಟಾದ ಕಂಕುಳು, ಗುಳ್ಳೆ ಎದ್ದ ಕೈಗಳು, ಮತ್ತು ಕೀಲುನೋವು ಕಾಣಿಸಿಕೊಳ್ಳುತ್ತವೆ. ಸಮಯ ಹಣಕ್ಕೆ ಸಮಾನವಾಗಿದ್ದು, ಶೌಚದ ಸಮಯವೂ ಅತ್ಯಮೂಲ್ಯವಾಗಿರುತ್ತದೆ. ದಾರಿಯಿಲ್ಲದೆ, ಮೂತ್ರವನ್ನು ತಡೆ ಹಿಡಿಯುವುದನ್ನು ಕಲಿತಿದ್ದೇವೆ. ಉತ್ಪಾದನೆಯ ಗುರಿ ಮುಟ್ಟಲು ಊಟ ಮತ್ತು ಚಹಾದ ಸಮಯವನ್ನು ತ್ಯಜಿಸಬೇಕಾಗಿದ್ದು, ಹೊಟ್ಟೆಗೆ ಹಸಿವೇ ಗೆಳೆಯನಾಗುತ್ತಾನೆ. ಹೊತ್ತು ಮೀರಿದ ಕೆಲಸಕ್ಕೇನು ಹೆಚ್ಚಿನ ವೇತನವಿಲ್ಲ. ಮತ್ತೆ ಮನೆಗೆ ಮರಳಿ ಏನೋ ಒಂದು ಹೊಟ್ಟೆ ಪಾಡಿಗೆ ತಿಂದ ನಂತರ, ಮಕ್ಕಳೊಂದಿಗೆ ಆಟವಾಡಲೂ ಸಮಯ ಇರುವುದಿಲ್ಲ. ಇದರಿಂದ ಯಾರಾದರೂ ಸರಿ, ಖಿನ್ನತೆಗೆ ಒಳಗಾಗುತ್ತಾರೆ.

ಗಮನವಿರಲಿ. ಗುಂಡಿಗಳನ್ನು ಸರಿಯಾಗಿ ಹೊಲಿಯುವುದಕ್ಕೆ, ಜಿಪ್ ಸರಿಯಾಗಿ ಕೂಡಿಸುವುದಕ್ಕೆ, ಬಟ್ಟೆ ಸರಿಯಾಗಿ ಮಡಿಸುವುದಕ್ಕೆ. ನಮ್ಮ ಕುಪ್ಪಸದಿಂದ ಕೆಳಗೆ ಜಾರುವ ಕೈ, ನಮ್ಮನ್ನು ಬಿಟ್ಟು ಬಿಡದೆ ನೋಡುವ ಆ ಕುಹಕದೃಷ್ಟಿ, ನಮ್ಮ ವಕ್ಷಸ್ಥಳವನ್ನು ಆಕಸ್ಮಿಕವಾಗಿ ಮುಟ್ಟುವ ಆ ಕೈಯನ್ನು ಮರೆಯಲು ಗಮನವಿಡಬೇಕು. ಇದು ನಮ್ಮ ಕೆಲಸದ ಒಂದು ಭಾಗವೆಂದು ಕೆಲವರು ಹೇಳುತ್ತಾರೆ. ನಮ್ಮ ದೂರುಗಳನ್ನು ಮಾನವ ಹಕ್ಕುಗಳ ವಿಭಾಗ ಕೇಳಿಸಿಕೊಳ್ಳುವುದಿಲ್ಲ. ನಮ್ಮ ಜೀವನಾಧಾರವಾದ ಈ ಕೆಲಸವನ್ನು ಯಾರು ತಾನೆ ಕಳೆದುಕೊಳ್ಳಲು ಇಚ್ಛಿಸುತ್ತಾರೆ ? ನಾವು ಶ್ರಮಪಟ್ಟು ತಯಾರಿಸುವ ಉಡುಪುಗಳು ನಮ್ಮ ಶ್ರಮದ ಎರಡು ಮೂರು ಪಟ್ಟು ಬೆಲೆಗೆ ಮಾರಾಟವಾಗುತ್ತವೆ. ನಾವು ಎಂದೂ ಭೇಟಿ ನೀಡದ ದೇಶ, ಪ್ರದೇಶಗಳಲ್ಲಿ, ಗಾಜಿನ ಅಂಗಡಿಗಳಲ್ಲಿ, ಬೊಂಬೆಗಳ ಮೇಲೆ ನಾವು ತಯಾರಿಸಿದ ಉಡುಪುಗಳನ್ನು ಹಾಕಿ ಪ್ರದರ್ಶಿಸುತ್ತಾರೆ. ನಾವು ಆರೋಗ್ಯವಾಗಿರಲಿ, ಅನಾರೋಗ್ಯದಿಂದ ಬಳಲುತ್ತಿರಲಿ ನಮ್ಮ ಬೆಲೆ ಕೇವಲ ನಮ್ಮ ಉತ್ಪಾದನೆಗೆ ಸಮಾನ. ಗಡಿಯಾರದ ಕೆಲಸದಂತೆ ಕಳೆಯುವ ನಮ್ಮ ಕೆಲಸದ ದಿನಗಳು, ನೋವು, ಅಸಮಾಧಾನ, ಅನಾರೋಗ್ಯ, ಬೈಗುಳ, ನಿಶ್ಯಬ್ದದ ಬಿರುಗಾಳಿಗೆ ಸಿಲುಕಿ ನಲುಗುತ್ತವೆ. ಅರೇ! ಆದರೆ ನಮ್ಮ ಟಾರ್ಗೆಟ್ ಮುಟ್ಟಿದರೆ ನಮಗೆ ‘ಕೇಕ್’ ಸಿಗುತ್ತದಲ್ಲವೇ ?

ಈ ನಗರದಲ್ಲಿ ನಮ್ಮಂತಹ ಒಂದು ಮಿಲಿಯನ್ ಕೆಲಸಗಾರರಿದ್ದಾರೆ. ನಮ್ಮ ಶ್ರಮವನ್ನು ಯಾರೂ ಆಚರಿಸುವುದಿಲ್ಲ, ಹೀಗಾಗಿ ಯಾವುದೇ ಅಭಿವೃದ್ಧಿಯ ಸೂಚನೆಯಿಲ್ಲ. ನಗರದ ಅಂಚಿನಲ್ಲಿರುವ ನಾವು ಯಾರ ಕಣ್ಣಿಗೂ ಬೀಳಬಾರದು, ಯಾರಿಗೂ ಕೇಳಿಸಬಾರದು. ಈ ಕಾಂಕ್ರೀಟಿನ ಮಹಲಿನಲ್ಲಿ ಗುಪ್ತರಾಗಿರುವ ನಾವು, ನಿರಂತರವಾಗಿ ಕಾರ್ಯ ನಿರ್ವಹಿಸುತ್ತಲೇ ಇರುತ್ತೇವೆ.

## ಸಂತಾಪ

ಕೆಲಸಕ್ಕೆಂದು ಕಾರ್ಮಿಕರು ತಮ್ಮ ಮನೆ ತೊರೆದು ಸಾವಿರಾರು ಮೈಲು ಪ್ರಯಾಣಿಸುತ್ತಾರೆ. ಅವರೆಂದೂ ವಾಸಿಸಲಾರದ ಮನೆ ಮಹಡಿಗಳನ್ನು ಕಟ್ಟುತ್ತಾರೆ. ನಮ್ಮಡಿಯ ನೆಲೆ ಇಂದು ಭದ್ರವಾಗಿಲ್ಲ. ನಮ್ಮ ಅಡಿಪಾಯವು, ಅಸಮಾನತೆ ಮತ್ತು ಅನ್ಯಾಯದ ಭಾರವನ್ನು ಹೊತ್ತುಬಂದಿದೆ. ಜುಲೈ 11, ಮುಂಜಾನೆ 2 ಗಂಟೆಗೆ, ಒಂದು ದೊಡ್ಡ ಸ್ಫೋಟದ ಶಬ್ದ ಕೇಳಿಸಿತು. ಬೆಂಗಳೂರಿನ ಶಾಂತ ನೆರೆಹೊರೆಯೊಂದರಲ್ಲಿ ನಿರ್ಮಾಣವಾಗುತ್ತಿದ್ದ ಕಟ್ಟಡದ ಜೊತೆಗೆ ಅದರ ಪಕ್ಕದ ಕಟ್ಟಡವು ಕುಸಿದ ಕಾರಣ ನೆಲ ನಡುಗಿದಂತಾಯಿತು. ನಗರದಲ್ಲಿ ಕಟ್ಟಡ ನಿರ್ಮಾಣದ ಸಾಮಾಗ್ರಿಗಳ ಮಧ್ಯೆ ಕೆಲಸ ಮಾಡುವ ಕಟ್ಟಡ ಕಾರ್ಮಿಕರ ಬಳಿ, ಅನಾಹುತಗಳಿಂದ ರಕ್ಷಿಸುವಂತಹ ಯಾವುದೇ ರೀತಿಯ ರಕ್ಷಾಕವಚವಿರುವುದಿಲ್ಲ. ಅವರ ಮಕ್ಕಳಿಗೆ ಮರಳು, ಸಿಮೆಂಟ್, ಜೆಲ್ಲಿ ಕಲ್ಲುಗಳೇ ಆಟದ ವಸ್ತುಗಳು; ಒಮ್ಮೊಮ್ಮೆ ಅವರ ತಂದೆ ತಾಯಿಗೆ ಸಹಾಯ ಮಾಡುವುದೂ ಉಂಟು. ಕಟ್ಟಡ ನಿರ್ಮಾಣವಾದ ನಂತರ, ಅವರು ಮುಂದಿನ ಸ್ಥಳಕ್ಕೆ ಸಾಗುತ್ತಾರೆ.

ಈ ಪ್ರಕರಣದಲ್ಲಿ, ಕಟ್ಟಡವು, ಮಲಗಿದ್ದ, ಬಹುಶಃ ಕನಸು ಕಾಣುತ್ತಿದ್ದ ಕೆಲಸಗಾರರ ಮೇಲೆ ಕುಸಿದಿದೆ. ಗುತ್ತಿಗೆಯ ಮೇಲೆ ಕೆಲಸ ಮಾಡುವ ವಲಸೆಯ ಕಾರ್ಮಿಕರು, ನೋಂದಾಯಿತರಾಗದೆ ದುರ್ಬಲರಾಗಿ, ಅನ್ಯ ನಗರದಲ್ಲಿ ಅಪರಿಚಿತರಾಗಿ ಸಾವನಪ್ಪುತ್ತಾರೆ. ನಗರದ ಬಗೆಗಿರುವ ನಮ್ಮ ಸಾಮೂಹಿಕ ದೃಷ್ಟಿಯ ದೋಷದಿಂದ ಮತ್ತು ಮಾನವನ ಮೂಲಭೂತ ಹಕ್ಕುಗಳೆಡೆಗೆ ಇರುವ ನಿರ್ಲಕ್ಷ್ಯದಿಂದ ಸಾವನಪ್ಪಿದ ಹಲವಾರು ಕಾರ್ಮಿಕರಿಗೆ ಈ ಸಂತಾಪವನ್ನು ಸರ್ಮಪಿಸಲಾಗಿದೆ. ಅವರ ಜೀವಾವಧಿಯಲ್ಲಿ ಹೆಚ್ಚು ಆಟವಾಡದ ಅವರ ಮಕ್ಕಳಿಗಾಗಿ ಶೋಕಿಸುತ್ತೇವೆ. ತಮ್ಮ ಪ್ರೀತಿಪಾತ್ರರು ಯಾವಾಗ, ಎಲ್ಲಿ ಮತ್ತು ಹೇಗೆ ಸಾವನಪ್ಪಿದರು ಎಂದು ತಿಳಿಯದೆ ರೋಧಿಸುತ್ತಿರುವ ಅವರ ಕುಟುಂಬಸ್ಥರ ಜೊತೆಗೆ ನಾವು ನಿಲ್ಲುತ್ತೇವೆ. ಇಂತಹ ಕ್ರೂರ, ದಾಖಲೆಯಿಲ್ಲದ ಸಾವುಗಳ ಮೇಲೆ ನೆಲೆಸಿರುವ ಈ ನಗರವು ಬೆಲೆ ತೆರುವುದು ಖಚಿತ. ಈ ಅವಶೇಷಗಳ ಪರ್ವತವು ಇದಕ್ಕೆ ಪುರಾವೆಯಾಗಿ ನಿಂತಿದೆ.

# ಅಂತರ ಧ್ವನಿ

“ಆಳುವ ದೌರ್ಜನ್ಯದ ನೆಲೆಯಲ್ಲಿ”
ಹೆಣ್ಣಿನ ಅಂತರ್ಧ್ವನಿ ಅಂತರ್ಗತವಾಗಿದೆ
ಪೌರುಷತ್ವದ ಹಿಡಿತದಲ್ಲಿ...
ಎಲ್ಲವನ್ನು ಸಂತೈಸುವ ಹೆಣ್ಣಿಗೆ
ನಿರ್ಬಂಧನೆ ಸಂಕೋಲೆಗಳೇ
ಭೂಷಣ!!

ವೀರ್ಯದ ತೃಷೆಯಲ್ಲಿ ನಲುಗಿದ ಹೆಣ್ತನದ ಗೋಳು
ಸ್ವಾತಂತ್ರ್ಯ ಮತ್ತು ಸಮಾನತೆಯ ಬದುಕಿಗಾಗಿಯೇ
ಎಂಬುದರ ಮನವರಿಕೆಯ ಅಗತ್ಯತೆ ಇದೆ

ಎಲ್ಲವನ್ನು ತೊರೆದು ಬೀದಿಯಲ್ಲಿ
ನಿಲ್ಲುವುದು ತಮಗಾಗಿಯಲ್ಲ, ಅದು
ವಿಕೃತ ಸಮಾಜದಲ್ಲಿ
ತನ್ನ ಚಹರೆಯ ಉಳಿವಿಗಾಗಿ.

ಮಲ್ಲಿಗೆ ಸುವಾಸನೆಯಲ್ಲಿ
ಕಂಡವರ ದೇಹದಾಹ ತೀರಿಸುವುದು
ನಮ್ಮ ಹೆಣ್ತನಕ್ಕೆ ಎರಗಿಬಂದ
ಹೇರಿಕೆಯ ಕಟ್ಟುಪಾಡೇ ವಿನಹ,
ಅದು ನಮ್ಮ ಆಯ್ಕೆಯಲ್ಲ.

*ಈ ಯೋಜನೆಯು ಇಂಡಿಯಾ ಫೌಂಡೇಷನ್ ಆಫ್ ಆರ್ಟ್ಸ್‌ನವರ ಸಹಕಾರದಿಂದ 560 ಕಾರ್ಯಕ್ರಮದ ಅಡಿ ಸಾಧ್ಯವಾಗಿದೆ*